# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 672
2. ಸದಸ್ಯರ ಹೆಸರು : ಶ್ರೀ ಕೆ.ಟಿ.ಶ್ರೀಕಂಠೇಗೌಡ
3. ಉತ್ತರಿಸಬೇಕಾದ ದಿನಾಂಕ : 04-03-2021

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಮಂಡ್ಯ ಜಿಲ್ಲೆಯಲ್ಲಿನ ನೀರಾವರಿ ನಾಲೆಗಳು ದುರಸ್ಥಿಯಾಗದೆ ದುಸ್ಥಿತಿಗೆ ತಲುಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. ಮಂಡ್ಯ ಜಿಲ್ಲೆಯಲ್ಲಿನ ಅವಶ್ಯವಿರುವ ನೀರಾವರಿ ನಾಲೆಗಳ ಆಧುನೀಕರಣ ಕಾಮಗಾರಿಗಳನ್ನು ಕೈಗೊಂಡು ನಾಲೆಗಳಲ್ಲಿ ನೀರಿನ ಸಾಗಣೆ ಕ್ಷಮತೆಯನ್ನು ಅಭಿವೃದ್ಧಿಗೊಳಿಸುವ ಮುಖೇನ ಸಮರ್ಪಕವಾಗಿ ನೀರನ್ನು ಹರಿಸಲಾಗುತ್ತಿದೆ. |
| ಆ | ನಾಲೆಗಳು ದುಸ್ಥಿತಿಯಲ್ಲಿರುವುದರಿಂದ ಜಿಲ್ಲೆಯ ಕೊನೆ ಭಾಗದ ರೈತರಿಗೆ ನೀರು ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನೀರಾವರಿ ನಾಲೆಗಳ ಕೊನೆಯ ಭಾಗದ ರೈತರಿಗೆ ನೀರು ತಲುಪಲು ಮೇಲ್ಕಂಡ ಕಾಮಗಾರಿಗಳ ಜೊತೆಗೆ ಆಯಾ ಆರ್ಥಿಕ ವರ್ಷದಲ್ಲೇ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಕೈಗೊಂಡು, ನಾಲೆಗಳಲ್ಲಿ ನೀರು ಸಮರ್ಪಕವಾಗಿ ಕೊನೆ ಭಾಗದ ರೈತರಿಗೆ ತಲುಪಲು ಕ್ರಮ ವಹಿಸಲಾಗಿದೆ. |
| ಇ | ಬಂದಿದ್ದಲ್ಲಿ, ಈ ನಾಲೆಗಳನ್ನು ಆಧುನೀಕರಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; | ಕೈಗೊಳ್ಳಲಾದ ಹಾಗೂ ಪ್ರಗತಿಯಲ್ಲಿರುವ ನಾಲೆಗಳ ಆಧುನೀಕರಣ ಕಾಮಗಾರಿಗಳ ವಿವರ ಕೆಳಕಂಡಂತಿದೆ :<br><br>**1. ಮಂಡ್ಯ ಜಿಲ್ಲೆ ವ್ಯಾಪ್ತಿಯ ಕೃಷ್ಣರಾಜಸಾಗರ ಯೋಜನೆ :**<br><br>✓ ಒಟ್ಟು 96.80 ಕಿ.ಮೀ ಉದ್ದದ ಮುಖ್ಯ ನಾಲೆ, 403.84 ಕಿ.ಮೀ ಉದ್ದದ ವಿತರಣಾ ನಾಲೆ ಹಾಗೂ 935.14 ಕಿ.ಮೀ ಉದ್ದ ಉಪ-ವಿತರಣಾ ನಾಲೆಗಳಿದ್ದು, ಇವುಗಳಲ್ಲಿ ಈಗಾಗಲೇ 49.80 ಕಿ.ಮೀ ಉದ್ದದ ಮುಖ್ಯ ನಾಲೆಯನ್ನು, 245.115 ಕಿ.ಮೀ ಉದ್ದದ ವಿತರಣಾ ನಾಲೆ ಹಾಗೂ 239.14 ಕಿ.ಮೀ ಉದ್ದ ಉಪ-ವಿತರಣಾ ನಾಲೆಗಳ ಆಧುನೀಕರಣ ಕಾಮಗಾರಿ ಪೂರ್ಣಗೊಂಡಿದೆ.<br><br>✓ ಅಣೆಕಟ್ಟು ನಾಲೆಗಳಾದ ಚಿಕ್ಕದೇವರಾಯಸಾಗರ, ದೇವರಾಯ, ವಿರಿಜ, ಶಿಂಷಾ ಹಾಗೂ ಬಂಗಾರದೊಡ್ಡಿ ನಾಲೆಗಳ ಒಟ್ಟು 276.30 ಕಿ.ಮೀ ಉದ್ದದಲ್ಲಿ ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ 220.67 ಕಿ.ಮೀ ಉದ್ದದ ಆಧುನೀಕರಣ ಕಾಮಗಾರಿ ಪೂರ್ಣಗೊಂಡಿರುತ್ತದೆ. ವಿ.ಸಿ ಮುಖ್ಯ ನಾಲೆಯ ಸರಪಳಿ 0.00 ರಿಂದ 46.00 ಕಿ.ಮೀ ರವರೆಗೆ ಮತ್ತು ಬಂಗಾರದೊಡ್ಡಿ ನಾಲೆಯ 15.28 ಕಿ.ಮೀ ಉದ್ದದ ಆಧುನೀಕರಣ ಕಾಮಗಾರಿ ಪ್ರಗತಿಯಲ್ಲಿದೆ.<br><br>✓ ವಿ.ಸಿ.ನಾಲಾ ಜಾಲದಡಿಯಲ್ಲಿ ಬರುವ ಶಾಖಾ ನಾಲೆ ಹಾಗೂ ವಿತರಣಾ ನಾಲೆಗಳ 158.73 ಕಿ.ಮೀ ಉದ್ದದ ಆಧುನೀಕರಣ ಕಾಮಗಾರಿಗಳನ್ನು ರೂ.317.46 ಕೋಟಿ ಮೊತ್ತದ ಪ್ರಸ್ತಾವನೆಯನ್ನು ತಯಾರಿಸಲಾಗಿದ್ದು, ಅನುದಾನದ ಲಭ್ಯತೆಯ ಮೇರೆಗೆ ಮುಂಬರುವ ಆರ್ಥಿಕ ವರ್ಷಗಳಲ್ಲಿ ಕೈಗೊಳ್ಳುವ ಕುರಿತು ಪರಿಶೀಲಿಸಲಾಗುವುದು. |

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td></td><td></td><td>

**2. ಮಂಡ್ಯ ಜಿಲ್ಲೆ ವ್ಯಾಪ್ತಿಯ ಹೇಮಾವತಿ ಯೋಜನೆ (ಕೆ.ಆರ್.ಪೇಟೆ, ಪಾಂಡವಪುರ, ನಾಗಮಂಗಲ ತಾಲ್ಲೂಕುಗಳಲ್ಲಿ) :**

✓ ಹೇಮಾವತಿ ಎಡದಂಡೆ ನಾಲೆಯ ಸರಪಳಿ 112ನೇ ಕಿ.ಮೀ ನಿಂದ 214.30ನೇ ಕಿ.ಮೀ ವರೆಗೆ ಒಟ್ಟಾರೆಯಾಗಿ 102.30 ಕಿ.ಮೀ ಉದ್ದದ ಮುಖ್ಯ ನಾಲೆಯು ಜಿಲ್ಲೆಯಲ್ಲಿ ಹಾದುಹೋಗಿದ್ದು, ಸದರಿ ನಾಲೆಯ ಆಧುನೀಕರಣ ಕಾಮಗಾರಿಯನ್ನು ರೂ.883.14 ಕೋಟಿಗಳ ಮೊತ್ತದಲ್ಲಿ (ಸರಪಳಿ 72.26 ಕಿ.ಮೀ ನಿಂದ 214.30 ಕಿ.ಮೀ ವರೆಗೆ) ಕೈಗೆತ್ತಿಕೊಂಡು 2019-20ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗಿದೆ.

✓ ಹೇಮಾವತಿ ಎಡದಂಡೆ ನಾಲೆಯು ಒಟ್ಟು 214.30 ಕಿ.ಮೀ ಉದ್ದವಿದ್ದು, ಈ ನಾಲೆಯಡಿಯಲ್ಲಿನ ಎಲ್ಲಾ 91 ವಿತರಣಾ ನಾಲೆಗಳನ್ನು ಆಧುನೀಕರಣಗೊಳಿಸುವುದು ಅವಶ್ಯಕವಾಗಿರುವುದರಿಂದ ಸದರಿ ವಿತರಣಾ ನಾಲೆಗಳನ್ನು ಆಧುನೀಕರಣಗೊಳಿಸಲು ಬೇಕಾಗುವ ರೂ.650.00 ಕೋಟಿಗಳ ಪ್ರಸ್ತಾವನೆಯನ್ನು ಅನುದಾನಕ್ಕೆ ಲಭ್ಯತೆಯ ಮೇರೆಗೆ ಮುಂಬರುವ ಆರ್ಥಿಕ ವರ್ಷಗಳಲ್ಲಿ ಕೈಗೊಳ್ಳುವ ಕುರಿತು ಪರಿಶೀಲಿಸಲಾಗುವುದು.

✓ ನಾಗಮಂಗಲ ಶಾಖಾ ಮುಖ್ಯ ನಾಲೆ ಕಿ.ಮೀ 0.00 ರಿಂದ 78.46 ವರೆಗೆ ಆಧುನೀಕರಣಗೊಳಿಸಲು ಬೇಕಾಗುವ ರೂ.475.00 ಕೋಟಿಗಳ ಪ್ರಸ್ತಾವನೆಯನ್ನು ತಯಾರಿಸಲಾಗಿದ್ದು, ಕಾವೇರಿ ನೀರಾವರಿ ನಿಗಮದ ಪರಿಶೀಲನೆಯಲ್ಲಿದೆ.

</td></tr>
<tr><td>ಈ</td><td>ಈ ನಾಲೆಗಳ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ ಎಷ್ಟು; (ವಿವರ ನೀಡುವುದು)</td><td>

ಕಳೆದ 3 ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕೈಗೊಂಡಿರುವ ನಾಲಾ ಅಭಿವೃದ್ಧಿ ಕಾಮಗಾರಿಗಳು ಮತ್ತು ನಿರ್ವಹಣೆಗಾಗಿ ಬಿಡುಗಡೆಯಾದ ಅನುದಾನದ ವಿವರಗಳು ಈ ಕೆಳಕಂಡಂತಿವೆ :

*(ರೂ. ಕೋಟಿಗಳಲ್ಲಿ)*

<table>
<tr><th rowspan="2">ಕ್ರ ಸಂ</th><th rowspan="2">ವರ್ಷ</th><th colspan="2">ಕ್ಯಾಪಿಟಲ್ ಕಾಮಗಾರಿಗಳು</th><th colspan="2">ನಿರ್ವಹಣಾ</th><th rowspan="2">ಒಟ್ಟು ವೆಚ್ಚ</th></tr>
<tr><th>ಬಿಡುಗಡೆಯಾದ ಅನುದಾನ</th><th>ವೆಚ್ಚ</th><th>ಬಿಡುಗಡೆಯಾದ ಅನುದಾನ</th><th>ವೆಚ್ಚ</th></tr>
<tr><td>1</td><td>2017-18</td><td>78.36</td><td>78.36</td><td>14.20</td><td>14.20</td><td>92.56</td></tr>
<tr><td>2</td><td>2018-19</td><td>381.92</td><td>381.92</td><td>17.91</td><td>17.91</td><td>399.83</td></tr>
<tr><td>3</td><td>2019-20</td><td>475.14</td><td>475.14</td><td>19.11</td><td>19.11</td><td>494.25</td></tr>
<tr><td colspan="2">ಒಟ್ಟು :-</td><td>935.42</td><td>935.42</td><td>51.22</td><td>51.22</td><td>986.64</td></tr>
</table>

</td></tr>
<tr><td>ಉ)</td><td>ಈ ಅನುದಾನದಿಂದ ಎಷ್ಟು ನಾಲೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ? (ವಿವರ ನೀಡುವುದು)</td><td>ಈ ಅನುದಾನದಿಂದ ಒಟ್ಟು 15 ಸಂಖ್ಯೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಈ ಪೈಕಿ 13 ಕಾಮಗಾರಿಗಳು ಪೂರ್ಣಗೊಂಡಿದ್ದು, 2 ಕಾಮಗಾರಿಗಳು ಪ್ರಗತಿಯಲ್ಲಿವೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.</td></tr>
</table>

***ಸಂಖ್ಯೆ:ಜಸಂಇ 35 ಎನ್‌ಎಲ್‌ಎ 2021***

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಕೆ.ಟಿ.ಶ್ರೀಕಂಠೇಗೌಡ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:672 ಕ್ಕೆ ಅನುಬಂಧ

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ಕಾಮಗಾರಿಯ ಹೆಸರು |
|---|---|
| **A.** | **Completed projects** |
| 1 | **Package-2 :** Improvements to Old Maddur Branch Canal, Shimsh Branch Canal, Shimsha tailend distributory & Kowdle Sub Branch Canal & its distributaries. |
| 2 | **Package-3 :**Improvements to New Maddur Branch Canal, NMBC & its distributories, Keragodu Branch Canal & its distributaries. |
| 3 | **Package-4 :** Improvements to Cauvery Branch Canal & its distributaries and Lokasar Branch Canal & its distributaries. |
| 4 | Modernisation Of Madhvamanthri Anecut Canal from Ch : 21.00 km to 29.20 km |
| 5 | Modernisation of Devaraya canal |
| 6 | Modernisation of Virija canal |
| 7 | Improvements to Distribuary L.B.L.L. Canal, 13th A Distributary, 20th Mile Distributary & 24th Mile Distribuary of V.C. Canal. |
| 8 | Improvements to RBLL Canals system under KRS Project |
| 9 | Modernisation of Chikkadevaraya Sagara (CDS) Canal |
| 10 | Providing CC lining using Mechanical paver from Ch 0.00 km to 11.50 km of DD Urs Canal. |
| 11 | Modernisation of Marehalli tank canal |
| 12 | Modernisation of Heballa Chennaiah |
| 13 | Modernisation of HLBC from Ch:112.00 km to 214.30 km |
| **B** | **On-going projects** |
| 14 | Modernisation of Bangardoddi Canal |
| 15 | Modernisation of VC Main Canal from Ch:0.00 to 46.40 KM (Phase-2) |